**ಓ.ಎಸ್. ನಂ. 9/2024** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 10.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ.ಸಿ ವಕೀಲರಿಂದಃ**

ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. 1 ನೇ ಪ್ರತಿವಾದಿಯು ಏನು ಓದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಪ್ರತಿವಾದಿಯರು ಈ ದಾವೆಗೆ ಸಲ್ಲಿಸಿರುವ ತಕರಾರಿನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರು ಖಾಯಂ ಆಗಿ ಹೆಬ್ಬಳ್ಳ ಗ್ರಾಮದಲ್ಲಿ ವಾಸವಾಗಿರುತ್ತಾರೆ. ದಾವಆಸ್ತಿಯು ಮಾರಾಟಕ್ಕಿರುತ್ತದೆ ಎಂದು ಮತ್ತು 2 ನೇ ಪ್ರತಿವಾದಿಯರು ನನ್ನ ಬಳಿ ಬಂದಿರುತ್ತಾರೆ. ಸದರಿ ವಿಚಾರವನ್ನು ನನ್ನ ದಾವಪತ್ರದಲ್ಲಿ ಹೇಳಿರುವುದಿಲ್ಲ. ಕರಾರುಪತ್ರದಲ್ಲಿ ದಾವಆಸ್ತಿಯು ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸಾಕ್ಷಿದಾರರು ಪಿತ್ರಾರ್ಜಿತ ಆಸ್ತಿಯು ವಿಭಾಗದ ಮೂಲಕ ಬಂದಿರುತ್ತದೆ ಎಂದು ಬರೆಯಲಾಗಿರುತ್ತದೆ ಎನ್ನುವರು. 1 ನೇ ಪ್ರತಿವಾದಿಗೆ ದಾವಆಸ್ತಿ ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯ ವ್ಯವಹಾರವನ್ನು ನಾನು, ಮತ್ತು 2 ನೇ ಪ್ರತಿವಾದಿಯರು ಹ್ಯಾಂಡಪೋಸ್ಟ್ ನಲ್ಲಿರುವ ನನ್ನ ಅಂಗಡಿಯಲ್ಲಿ ಮಾಡಿರುತ್ತೇವೆ. ಸದರಿ ಸಮಯದಲ್ಲಿ ಆನಂದ್, ನಾಗೇಗೌಡ ಹಾಗೂ ಇನ್ನಿಬ್ಬರು ಹಾಜರಿದ್ದರು. ಮಾತುಕತೆಯು ಮದ್ಯಾಹ್ನ 12 ರಿಂದ 1 ಗಂಟೆವರೆಗೆ ಆಗಿರುತ್ತದೆ. ಮಾತುಕತೆಯಲ್ಲಿ ಪ್ರತಿ ಎಕರೆಗೆ ಇಂತಿಷ್ಟು ಮೌಲ್ಯ ಎಂದು ಮಾತುಕತೆಯಾಗಿರುತ್ತದೆ. ಪ್ರತಿವಾದಿಯರು ಎಕರೆಗೆ 8 ರಿಂದ 10 ಲಕ್ಷ ಕೇಳುತ್ತಿದ್ದರು. ನಾನು ಮತ್ತು ಮಧ್ಯಸ್ಥಿಕೆಗಾರರು ಸೇರಿ ಎಕರೆಗೆ 6 ಲಕ್ಷದಂತೆ ವ್ಯವಹಾರ ಮುಗಿಸಿರುತ್ತೇವೆ. ದಾವಆಸ್ತಿಯು ಹುಣಸೂರು-ಹೆಚ್.ಡಿ.ಕೋಟೆ ಮುಖ್ಯ ರಸ್ತೆಯ ಬದಿಯಲ್ಲಿರುತ್ತದೆ ಎಂದರೆ ಸರಿ. ದಾವಆಸ್ತಿಯು ಶಾಂತಿಪುರದ ತಂಬಾಕು ಮಂಡಳಿ ಹತ್ತಿರ ಇರುತ್ತದೆ ಎಂದರೆ ಸರಿ. ಕರಾರುಪತ್ರವು ದಿನಾಂಕ 25.3.2021 ರಂದು ಆಗಿರುತ್ತದೆ. 2020 ರಲ್ಲಿ ವಡ್ಡರಗುಡಿ ಮತ್ತು ಶಾಂತಿಪುರ ಪುರಸಭೆ ವ್ಯಾಪ್ತಿಗೆ ಸೇರಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಈಗ ಸದರಿ ಗ್ರಾಮಗಳು ಪುರಸಭೆ ವ್ಯಾಪ್ತಿಗೆ ಸೇರಿರುತ್ತದೆ ಎಂದರೆ ಸರಿ. ಮಾತುಕತೆಯಾದ ದಿನ ನಾನು ರೂ. 50,000/- ವನ್ನು ಪ್ರತಿವಾದಿಯರಿಗೆ ನೀಡಿರುತ್ತೇನೆ. ಮಾತುಕತೆಯಾದ ದಿನ ರೂ. 50,000/- ಮತ್ತು ಉಳಿದ 2.50 ಲಕ್ಷ ಹಣವನ್ನು ಕರಾರುಪತ್ರವಾದ ದಿನ ನೀಡಿರುತ್ತೇನೆ ಎಂದು ದಾವಪತ್ರದಲ್ಲಿ ಹೇಳಿರುವುದಿಲ್ಲ. 3 ಲಕ್ಷ ಹಣ ಜಮೀನಿನ ಅದಾಯದಿಂದ ಬಂದಿರುತ್ತದೆ. ಜಮೀನಿನಿಂದ ಆದಾಯ ಬಂದಿರುವ ಬಗ್ಗೆ ರಶೀದಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿದಾರರು ವಸ್ತುಗಳನ್ನು ಮಾರಾಟ ಮಾಡಿದಾಗ ರಶೀದಿ ನೀಡುವುದಿಲ್ಲ, ಆದರೆ ಬ್ಯಾಂಕ್ ಸ್ಟೇಟಮೆಂಟನ್ನು ನೀಡಿರುತ್ತೇನೆ ಎನ್ನುವರು. ಕರಾರುಪತ್ರವನ್ನು ಪತ್ರ ಬರಹಗಾರರು ತಯಾರಿಸಿದ್ದು, ಅವರಿಗೆ ಮಾಹಿತಿಯನ್ನು ನಾನು ಮತ್ತು ಪ್ರತಿವಾದಿಯರು ನೀಡಿರುತ್ತೇವೆ.

ಸ್ಟಾಂಪ್ ಪೇಪರನ್ನು ಪ್ರತಿವಾದಿಯರು ಮೊದಲೇ ಪತ್ರ ಬರಹಗಾರರಿಗೆ ನೀಡಿರುತ್ತಾರೆ, ನಂತರ ನಾನು ಹೋಗಿರುತ್ತೇನೆ. ಸ್ಟಾಂಪ್ ಪೇಪರನ್ನು ಎಷ್ಟು ಗಂಟೆಗೆ ನೀಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಕರಾರುಪತ್ರವನ್ನು ಪತ್ರ ಬರಹಗಾರರಾದ ಚನ್ನಕೇಶವಗೌಡ ರವರು ತಯಾರಿಸಿರುತ್ತಾರೆ. ಸದರಿ ಚನ್ನಕೇಶವಗೌಡ ನನ್ನ ದೂರದ ಸಂಬಂಧಿಕರಾಗಿರುತ್ತಾರೆ. ನಾನು 3 ಲಕ್ಷ ಹಣವನ್ನು ಕರಾರುಪತ್ರ ನೋಂದಣಿಯಾದ ಸಮಯದಲ್ಲಿ ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ನೀಡಿರುತ್ತೇನೆ. ಹಣ ನೀಡಿರುವ ಬಗ್ಗೆ ಹಣ ಸಂದ ರಶೀದಿಯನ್ನು ಬರೆಸಿಕೊಂಡಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.